ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಆ ವರ್ಷ ಕೇವಲ 440 ರೂಪಾಯಿಗೆ ತೆಗೆದುಕೊಂಡಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಾಗಲ್ಲ, ಅನಲು ಬೆರೆಗೆ ಕೊಟ್ಟಿದ್ದೇವೆ. ಅದರಿಂದ ನಮಗೆ ನಷ್ಟವಾಗಿಲ್ಲ. ಸಬ್‌ಸಿಡೈಸ್ ಮಾಡಿಲ್ಲ.

ಶ್ರೀ ಎಸ್. ರಂ ರಾಮಯ್ಯನವರು.—ಉತ್ತಮ ತರಹೆಯ ಬೀ ದ ಬತ್ತವನ್ನು ಅಧಿಕ ಪ್ರಮಾಣದಲ್ಲಿ ಬೆಳೆದು ಹಂಚುವುದು ಎಂಬ ಬಾಬಿನಲ್ಲಿ ವೆಚ್ಚ 1,42,165 ರೂಪಾಯಿನಿಂದ 44,257 ರೂಪಾಯಿಗೆ ಇಳಿದಿದೆ, ಏಕೆ ಇದು ಹೀಗೆ ಕಡಿಮೆಯಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಡಿಮ್ಯಾಂಡಿದ್ದುದು ಅಷ್ಟೇ ಎಂದು ಕಾಣುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವುದಕ್ಕೆ 45,880 ರೂಪಾಯಿ ಖರ್ಚಾಗಿದೆಯೆಂದು ತಿಳಿಸಿದೆ, ಎಷ್ಟು ಟನ್ ಉತ್ಪತ್ತಿಯಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ನಮ್ಮ ಯೋಜನೆಯನ್ನು ಸ್ವಲ್ಪ ಬದಲಾವಣೆ ಮಾಡಿದ್ದೇವೆ. ಮೊದಲು ಒಂದೊಂದು ಗೊಬ್ಬರದ ಗುಂಡಿಗೆ ಎರಡು ರೂಪಾಯಿನಂತೆ ಜನರಿಗೆ ಕೊಡುತ್ತಿದ್ದೆವು. ಈಗ ಒಂದು ಗ್ರಾಮಕ್ಕೆ ಒಟ್ಟಿಗೆ ಹಣ ಕೊಡುತ್ತೇವೆ. 100 ಗುಂಡಿಗಳನ್ನು ತೆಗೆದರೆ 200 ರೂಪಾಯಿ ಗ್ರಾಮಕ್ಕೆ ಕೊಡುತ್ತೇವೆ. ಹೀಗೆ ಮಾಡಿದ ಮೇಲೆ ಜನರಿಂದ ಬಲ್ಲುಗಳು ಬರುವುದು ಕಡಿಮೆಯಾಯಿತು, ಖರ್ಚು ಕಡಿಮೆಯಾಯಿತು.

ಶ್ರೀ ಎಸ್. ರಂಗರಾಮಯ್ಯನವರು.—ಮುನಿಸಿಪಾಲಿಟಿಗಳಲ್ಲಿ ಮಾಡುವುದಕ್ಕೆ ಸಬ್‌ಸಿಡಿ ಕೊಡುವುದೇಕೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಗರ ಪ್ರದೇಶಗಳಲ್ಲಿ ಇದರಿಂದ ರಾಭ ಪಡೆಯುತ್ತಾರೆ. ಸಬ್‌ಸಿಡೈಸ್ ಮಾಡುವುದನ್ನು ಮಾತ್ರ ಇಲ್ಲಿ ತೋರಿಸಲಾಗಿದೆ.

ಶ್ರೀ ಎಸ್. ರಂಗರಾಮಯ್ಯನವರು.—ನೀರಾವರಿ ಪಂಪುಗಳೇದರೆ ಅದರಲ್ಲಿ ವಿದ್ಯುಚ್ಛಕ್ತಿ ಪಂಪುಗಳೂ ಸೇರಿವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ವಿದ್ಯುಚ್ಛಕ್ತಿ ಪಂಪುಗಳು, ಡೀಸೆಲ್ ಆಯಿಲ್ ಪಂಪುಗಳು ಎಲ್ಲವೂ ಸೇರುತ್ತವೆ.

ಶ್ರೀ ಎಸ್. ರಂಗರಾಮಯ್ಯನವರು.—ಪಂಪುಗಳನ್ನು ಯಾವ ಕಂಪೆನಿಯಿಂದ ಕೊಂಡುಕೊಳ್ಳುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಹಿಂದೆ ಬ್ರಿಟಿಷ್ ಕಂಪೆನಿಗಳಿಂದ, ಕಿರ್ಲೋಸ್ಕರ ಕಂಪೆನಿ ಮುಂತಾದ ಕಡೆಗಳಿಂದ ತರಿಸುತ್ತಿದ್ದೆವು, ಕೊಚೇರ್ಷ್ ಕರೆದು ಯಾವುದು ಕಡಿಮೆ ಬೆಲೆಯೋ ಅದನ್ನು ತರಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಈಗ ಕೊಟ್ಟಿರುವುದರಲ್ಲಿ ಕೆಲವು ಪಂಪುಗಳು ಕೆಟ್ಟುಹೋಗಿ ತೊಂದರೆ ಕೊಡುತ್ತಿವೆಯೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಬಂದರೆ ಅದನ್ನು ಸರಿಪಡಿಸುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಕೆಟ್ಟು ಹೋಗಿರುವುದನ್ನು ಸರಿಮಾಡಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ತೊಂದರೆಯೇ ನವ ಗೆ ಬೇಡವೆಂದು ರೈತರೇ ಹೋಗಿ ಕೊಂಡು ಕೊಂಡು ಬಂದು certify ಮಾಡಿದರೆ ಹಣ ಕೊಡುತ್ತೇವೆ. ಈ ಬದಲಾವಣೆ ಮಾಡಿದ್ದೇವೆ. We have washed our hands off now.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಮಾಡಿ ಎಷ್ಟು ದಿವಸವಾಯಿತು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು ಮೂರು ತಿಂಗಳಾಯಿತು. ರೈತರೇ ತಾವು instal ಮಾಡಿದ್ದೇವೆಂದು ಹೇಳಿ ಸರ್ಟಿಫಿಕೇಟು ಕೊಟ್ಟರೆ ಹಣವನ್ನು ಕೊಡುತ್ತೇವೆ.

Mr. SPEAKER.—Question time is over.

UNSTARRED QUESTIONS.

(to which answers were laid on the Table).

(A) Starred Question treated as unstarred.

Rents of Buildings leased for use of Government.

*Q.—177. **Sri Kadidal MANJAPPA** (Shimoga District—General).—

Will the Government be pleased to state:—

the amount of rent that was paid during the year 1949-50 in respect of building taken on lease for the use of Government?

A.—**The Hon'ble Sri T. MARIAPPA** (Home Minister).—Rs. 5,179.

(B) Unstarred Questions.

Particulars of Home Guards Organisation.

Q.—12. **Sri S. R. GURU** (Bangalore District—General).—

Will the Government be pleased to state:—

(a) (i) the object of starting the Home Guards in the State, (ii) whether the object was achieved;

(b) the total number of people that were enrolled in the force when it was started;

(c) whether it is true that it has been wound up in some places; if so, the places in which it is being continued (talukwar figures to be given);